**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

ಸತ್ರ ಮೊಕದ್ದಮೆ ನಂಃ **95/2024**

| | | |
|---|---|---|
| ಸಾಕ್ಷಿದಾರರ ಹೆಸರು | - ಶಂಭುಲಿಂಗನಗೌಡ | ಪಿಡಬ್ಲೂ - 10 |
| ತಂದೆಯ ಹೆಸರು | - ಚನ್ನಬಸವನಗೌಡ | ಸಿಡಬ್ಲೂ - 31 |
| ವಯಸ್ಸು | - 31 ವರ್ಷ | |
| ಉದ್ಯೋಗ | - ಪಿ.ಎಸ್.ಐ.,<br>ನಗರ ಪೊಲೀಸ್ ಠಾಣೆ,<br>ಚಿಕ್ಕಮಗಳೂರು | |
| ವಾಸ ಸ್ಥಳ | - ಚಿಕ್ಕಮಗಳೂರು | |

ದಿನಾಂಕಃ 24.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(*ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.*)*

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಜೂನ್ 2023 ರಿಂದ ನಾನು ಚಿಕ್ಕಮಗಳೂರು ನಗರ

ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 10-05-2024 ರಂದು ಬೆಳಿಗ್ಗೆ ಸುಮಾರು 6 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಹಿಂದಿನ ದಿನ ರಾತ್ರಿ ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದ ಚಾಸಾ.20 ಪ್ರಮೋದ್ ರವರು ದೂರವಾಣಿ ಮೂಲಕ ಚಿಕ್ಕಮಗಳೂರಿನ ಐ.ಜಿ. ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ಸ್ ಹತ್ತಿರ ಒಬ್ಬ ಮಹಿಳೆಯ ಕೊಲೆಯಾಗಿದೆ ಎಂದು ಮಾಹಿತಿ ಬಂದಿದ್ದಾಗಿ ನನಗೆ ತಿಳಿಸಿದರು. ನಂತರ ಅದೇ ದಿನ ಬೆಳಿಗ್ಗೆ 6.30 ಗಂಟೆಗೆ ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದೆನು. ಅಷ್ಟೊತ್ತಿಗಾಗಲೇ ಶವವನ್ನು ಪ್ರಾಸಾ.2 ಮತ್ತು ಚಾಸಾ.10 ರವರು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಸಾಗಿಸಿದ್ದ ಬಗ್ಗೆ ಮಾಹಿತಿ ಬಂತು. ನಂತರ ನಾನು ಸದರಿ ಆಸ್ಪತ್ರೆಯ ಶವಗಾರಕ್ಕೆ ಹೋಗಿ ಶವವನ್ನು ನೋಡಿ ಠಾಣೆಗೆ ಹಿಂದಿರುಗಿದೆನು.

3. ಅದೇ ದಿನ ಬೆಳಿಗ್ಗೆ 8 ಗಂಟೆ ಸಮಯದಲ್ಲಿ ಕೊಲ್ಲಿಬೈಲಿನ ನಡುವಿನ ಮಡ್ಕಲ್ ವಾಸಿಯಾದ ಮೃತಳ ಮಗನಾದ ಪ್ರಾಸಾ-1 ಸುಮಂತ್ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆಃ 77/2024 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು,

ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಾನು ದಾಖಲು ಮಾಡಿದ್ದ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಪ್ರಕರಣವು ಘೋರ ಅಪರಾಧವನ್ನು ಒಳಗೊಂಡಿದ್ದರಿಂದ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.32 ರವರಿಗೆ ನೀಡಿದೆನು. ಸಾಕ್ಷಿಯು ಈಗಾಗಲೇ ನಿಪಿ.3 ಮತ್ತು ಪಿ.4 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳಲ್ಲಿ ಆ ದಿನ ನಾನು ಶವಗಾರದಲ್ಲಿ ನೋಡಿದ ಮಹಿಳೆಯ ಶವ ಕಂಡುಬರುವುದಾಗಿ ನುಡಿದಿರುತ್ತಾರೆ.

**ಪಾಟೀ ಸವಾಲುಃ LADCS ನ Deputy Chief Defense counsel ಆದ ಶ್ರೀ ಎನ್ ಡಿ ವಕೀಲರಿಂದಃ ಆರೋಪಿ ಪರವಾಗಿಃ**

4. ನಾನು ಶವವನ್ನು ನೋಡಿಕೊಂಡು ಠಾಣೆಗೆ ಹಿಂದಿರುಗಿದಾಗ ಸಮಯ ಬೆಳಿಗ್ಗೆ 7 ರಿಂದ 7.30 ಗಂಟೆಯಾಗಿತ್ತು. ಆ ಸಮಯದಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲು ನಿಮಗೆ ತೊಂದರೆ ಇತ್ತೆ ಎಂದರೆ ಸಾಕ್ಷಿ ದೂರುದಾರರು ಯಾರು ಇರಲಿಲ್ಲ ಎನ್ನುತ್ತಾರೆ. ನೀವು ಠಾಣೆಗೆ ಹಿಂದಿರುಗಿದಾಗ ಆರೋಪಿ ನಿಮ್ಮ ಠಾಣೆಯಲ್ಲಿ ಇದ್ದನೇ ಎಂದರೆ

ಸಾಕ್ಷಿ ಇರಲಿಲ್ಲ ಎನ್ನುತ್ತಾರೆ. ನೀವು ಠಾಣೆಗೆ ಹಿಂದಿರುಗಿದಾಗ ಆರೋಪಿ ನಿಮ್ಮ ಠಾಣೆಯಲ್ಲೇ ಇದ್ದನು ಎಂದರೆ ಸರಿಯಲ್ಲ. ಆ ಬಗ್ಗೆ ನೀವು ಸುಳ್ಳು ಸಾಕ್ಷ್ಯನುಡಿದ್ದೀರಿ ಎಂದರೆ ಸರಿಯಲ್ಲ.

5. ಚಿಕ್ಕಮಗಳೂರಿನ ಹಿರಿಯ ಸಿವಿಲ್ ಜಡ್ಜ ಮತ್ತು ಸಿಜೆಎಂ ನ್ಯಾಯಾಧೀಶರವರು ಕ್ರಿಮಿನಲ್ ಮಿಸ್ 307/2023 ರಲ್ಲಿ ಮಾಡಿದ್ದ ಆದೇಶದ ಮೇರೆಗೆ ಆರೋಪಿಯನ್ನು ನಿಮಾನ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸುವಂತೆ ಸೂಚಿಸಲಾಗಿತ್ತು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಯಾವುದೇ ವ್ಯಕ್ತಿಗೆ ಮೆಂಟಲ್ ಆಕ್ಟ್ ಅಡಿಯಲ್ಲಿ ಚಿಕಿತ್ಸೆ ಕೊಡಿಸಿದಾಗ ಅದಕ್ಕೆ ಸಂಬಂದಪಟ್ಟ ದಾಖಲೆಗಳನ್ನು ನಿಮ್ಮ ಠಾಣೆಯಲ್ಲಿ ನಿರ್ವಹಿಸುತ್ತೀರಿ ಎಂದರೆ ಸರಿಯಲ್ಲ. ಮೇಲೆ ಹೇಳಿದ ಪ್ರಕರಣಕ್ಕೆ ಸಂಬಂದಪಟ್ಟಂತೆ ನಿಮಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

6. ನಿಮ್ಮ ಠಾಣೆಯಿಂದ ದಿಃ 10-05-2024 ರಂದು ಬೆಳಗಿನ ಜಾವ 3 ಗಂಟೆಗೆ ಅಪರಿಚಿತ ಮಹಿಳೆಯ ಮೇಲೆ ಪೂರ್ಣೇಶ್ ಬಿನ್ ರಾಜೇಗೌಡ, ರಾಮನಹಳ್ಳಿ ಎಂಬುವವರು ತಲೆಯ ಮೇಲೆ ಕಲ್ಲನ್ನು ಹಾಕಿ ಕೊಲೆ ಮಾಡಿದ್ದು ಕೊಲೆಯಾದ ಅಪರಿಚಿತ ಮಹಿಳೆಯ ಮೃತ ದೇಹವನ್ನು ಮುಂದಿನ ಕ್ರಮ ಜರುಗಿಸುವವರೆಗೆ ಶವಗಾರದಲ್ಲಿಡಲು ಅನುಮತಿ ಕೋರಿ ನಿಮ್ಮ ಠಾಣೆಯ ಮುಖ್ಯ ಪೇದೆ 368 ಪ್ರಮೋದ್.ಎಲ್ ರವರು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಯ ಕರ್ತವ್ಯ ನಿರತ ವೈದ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದ ಬಗ್ಗೆ ನಿಮಗೆ ಮಾಹಿತಿ

ಇದೆಯೇ ಎಂದರೆ ಸಾಕ್ಷಿ ಆ ಬಗ್ಗೆ ಪ್ರಮೋದ್ ರವರು ಮೌಖಿಕವಾಗಿ ತಿಳಿಸಿದ್ದರು ಎನ್ನುತ್ತಾರೆ. ನೀವು ನಿಪಿ.2 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವ ಕಾಲಕ್ಕೆ ಆರೋಪಿ ಬಗ್ಗೆ ನಿಮಗೆ ಮಾಹಿತಿ ಇತ್ತೇ ಎಂದರೆ ಸಾಕ್ಷಿ ಪೂರ್ಣೇಶ್ ಬಿನ್ ರಾಜೇಗೌಡ, ರಾಮನಹಳ್ಳಿ ಎಂದಷ್ಟೇ ಮಾಹಿತಿ ಇತ್ತು ಆದರೆ ಆತ ಯಾರೆಂದು ಗೊತ್ತಿರಲಿಲ್ಲ ಎನ್ನುತ್ತಾರೆ. ಆರೋಪಿಯನ್ನು ಆ ಸಮಯದಲ್ಲಿ ನಿಮ್ಮ ಠಾಣೆಯಲ್ಲೇ ಇರಿಸಿಕೊಂಡಿದ್ದರೂ ಸಹ ಆತನ ಬಗ್ಗೆ ಮಾಹಿತಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ದಾಖಲಿಸಿದ ಪ್ರಥಮ ವರ್ತಮಾನ ವರದಿಯಲ್ಲಿ ಮೇಲೆ ಹೇಳಿದಂತೆ ಪ್ರಮೋದ್ ರವರು ಕಳುಹಿಸಿದ್ದ ಮನವಿಯ ಬಗ್ಗೆ ಉಲ್ಲೇಖಿಸಲಾಗಿದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಉದ್ದೇಶಪೂರ್ವಕವಾಗಿ ಸದರಿ ಮಾಹಿತಿಯನ್ನು ಮರೆಮಾಚಿದ್ದೀರಿ ಎಂದರೆ ಸರಿಯಲ್ಲ.

7. ದಿಃ 10-05-2024 ರಂದು ಬೆಳಗಿನಂ ಜಾವ 2.30 ಗಂಟೆ ಸುಮಾರಿಗೆ ಆರೋಪಿಯನ್ನು ಸಾರ್ವಜನಿಕರು ಹಿಡಿದುಕೊಂಡು ಸ್ಥಳದಲ್ಲಿಯೇ ಪೊಲೀಸರಿಗೆ ಒಪ್ಪಿಸಿದ್ದರು ಸಹ ಬಂಧನದ ಅವಧಿ ಅಲ್ಲಿಂದ ಪ್ರಾರಂಭವಾಗುತ್ತದೆ ಎಂದು ಮರೆಮಾಚಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ರಾತ್ರಿ ಯಾವುದು, ಬೆಳಿಗ್ಗೆ ಯಾವುದು ಎಂದು ತಿಳಿಯದೇ ಎಲ್ಲೆಂದರಲ್ಲಿ ಅಲೆದಾಡುತ್ತಿದ್ದ ಆರೋಪಿಯನ್ನು ಸಾರ್ವಜನಿಕರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದರೆ

ಸರಿಯಲ್ಲ. ಆರೋಪಿಯನ್ನು ಪೊಲೀಸರಿಗೆ ಒಪ್ಪಿಸಿದಾಗಿನಿಂದ ಪ್ರಕರಣ ದಾಖಲಾಗುವವರೆಗೆ ವಿಳಂಬವಾಗಿದ್ದು ಆ ಅವಧಿಯಲ್ಲಿ ತನಿಖೆಯನ್ನು ನಿಮಗೆ ಬೇಕಾದಂತೆ ತಿರುಚಲು ಅನುಕೂಲವಾಗುವಂತೆ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

8. ನಾನು ಶವಗಾರಕ್ಕೆ ಭೇಟಿ ನೀಡಿದಾಗ ಮೃತಳ ಸಂಬಂಧಿಕರು ಯಾರು ಇರಲಿಲ್ಲ, ಆದರೆ ಫ್ರಾಸಾ.2 ಮತ್ತು ಚಾಸಾ.10 ರವರು ಇದ್ದರು. ಫ್ರಾಸಾ.1 ರವರು ಠಾಣೆಗೆ ಬರುವ ಪೂರ್ವದಲ್ಲಿಯೇ ದೂರನ್ನು ತಯಾರಿಸಿ ತಂದಿದ್ದರು. ಆ ಸಮಯದಲ್ಲಿ ಫ್ರಾಸಾ.1 ರವರೊಂದಿಗೆ ಅವರ ಚಿಕ್ಕಮ್ಮ ಮತ್ತು ಚಿಕ್ಕಪ್ಪ ಆದ ಚಾಸಾ.3 ಜ್ಯೋತಿ ಮತ್ತು ಫ್ರಾಸಾ.4 ಪ್ರಸನ್ನ ರವರು ಬಂದಿದ್ದರು. ಆ ಸಮಯದಲ್ಲಿ ನಾನು ಅವರನ್ನು ವಿಚಾರಿಸಿ ಹೇಳಿಕೆಯನ್ನು ಪಡೆದಿಲ್ಲ.

9. ದಿನಾಂಕಃ 10-05-2024 ರಂದು ಬೆಳಿಗ್ಗೆ ಸುಮಾರು 6 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಹಿಂದಿನ ದಿನ ರಾತ್ರಿ ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದ ಚಾಸಾ.20 ಪ್ರಮೋದ್ ರವರು ದೂರವಾಣಿ ಮೂಲಕ ಚಿಕ್ಕಮಗಳೂರಿನ ಐ.ಜಿ. ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ಸ್ ಹತ್ತಿರ ಒಬ್ಬ ಮಹಿಳೆಯ ಕೊಲೆಯಾಗಿದೆ ಎಂದು ಮಾಹಿತಿ ಬಂದಿದ್ದಾಗಿ ನನಗೆ ತಿಳಿಸಿದರು, ನಂತರ ಅದೇ ದಿನ ಬೆಳಿಗ್ಗೆ 6.30 ಗಂಟೆಗೆ ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದೆನು, ಅಷ್ಟೊತ್ತಿಗಾಗಲೇ ಶವವನ್ನು ಫ್ರಾಸಾ.2 ಮತ್ತು ಚಾಸಾ.10 ರವರು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ

ಸಾಗಿಸಿದ್ದ ಬಗ್ಗೆ ಮಾಹಿತಿ ಬಂತು, ನಂತರ ನಾನು ಸದರಿ ಆಸ್ಪತ್ರೆಯ ಶವಗಾರಕ್ಕೆ ಹೋಗಿ ಶವವನ್ನು ನೋಡಿ ಠಾಣೆಗೆ ಹಿಂದಿರುಗಿದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

10. ಅದೇ ದಿನ ಬೆಳಿಗ್ಗೆ 8 ಗಂಟೆ ಸಮಯದಲ್ಲಿ ಕೊಲ್ಲಿಬೈಲಿನ ನಡುವಿನ ಮಡ್ಕಲ್ ವಾಸಿಯಾದ ಮೃತಳ ಮಗನಾದ ಫ್ರಾಸಾ-1 ಸುಮಂತ್ ರವರು ಠಾಣೆಗೆ ಹಾಜರಾಗಿ ನಿಪಿ.1 ರಂತೆ ದೂರನ್ನು ನೀಡಿದ್ದಾಗಿ, ಅದರ ಮೇರೆಗೆ ನೀವು ನಿಪಿ.2 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಠಾಣೆಯಲ್ಲೇ ಇದ್ದರು ಸಹ ಮತ್ತು ಆತ ಮಾನಸಿಕ ಅಸ್ವಸ್ಥ ಎಂದು ನಿಮಗೆ ತಿಳಿದಿದ್ದರೂ ಸಹ ಆತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ